ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magzine*

ಸಂಪುಟ 4 ಸಂಚಿಕೆ 21 ಸೆಪ್ಟೆಂಬರ್ 2019




ಮೈಸೂರು ನಾಗರಿಕರ ವೇದಿಕೆಯಿಂದ ನೆರೆ ಸಂತ್ರಸ್ತರ ಪರಿಹಾರ ನಿಧಿಗೆ ಒಂದು ಕೋಟಿ ರೂಪಾಯಿಗಳ ಚೆಕ್ಕನ್ನು ಜಗದ್ಗುರುಗಳವರ ದಿವ್ಯ ಸಮ್ಮುಖದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ ನೀಡಲಾಯಿತು. ಚಿತ್ರದಲ್ಲಿ ಶ್ರೀ ಆರ್.ಗುರು, ಶ್ರೀ ವಿ. ಸೋಮಣ್ಣ, ಶ್ರೀಮತಿ ಶೋಭಾ ಕರಂದ್ಲಾಜೆ, ಸದ್ಗುರು ಶ್ರೀ ಜಗ್ಗಿವಾಸುದೇವ್ ಮೊದಲಾದವರಿದ್ದಾರೆ



ಮೈಸೂರಿನ ಶ್ರೀಸುತ್ತೂರು ಮಠದಲ್ಲಿ ಶ್ರಾವಣ ಮಾಸ ಪ್ರವಚನ ಕಾರ್ಯಕ್ರಮವನ್ನು ಸೆಸ್ಕ್‌ನ ಮುಖ್ಯ ಎಂಜಿನಿಯರ್ ಶ್ರೀ ಎಸ್.ಟಿ. ಮಂಜುನಾಥ್ ಉದ್ಘಾಟಿಸಿದರು. ಚಿತ್ರದಲ್ಲಿ ದಡದಹಳ್ಳಿ ಶ್ರೀ ಗುರುಮಲ್ಲೇಶ್ವರ ಮಠದ ಶ್ರೀ ಷಡಕ್ಷರ ಸ್ವಾಮಿಗಳು, ಶ್ರೀ ಕೃ. ರಾಮಚಂದ್ರ, ಡಾ. ಕೆ. ಅನಂತರಾಮು, ಡಾ. ಬಿ.ವಿ. ವಸಂತಕುಮಾರ್ ಮತ್ತು ಶ್ರೀ ಟಿ.ಎಸ್. ಸುಬ್ರಹ್ಮಣ್ಯರವರು




ಮೈಸೂರಿನ ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜಿನಲ್ಲಿ ನಡೆದ ಪದವೀಧರರ ದಿನಾಚರಣೆಯಲ್ಲಿ ಪ್ರಾಂಶುಪಾಲರಾದ ಡಾ. ಎಸ್. ರವೀಂದ್ರ, ಸಮಕುಲಪತಿಗಳಾದ ಡಾ. ಬಿ. ಸುರೇಶ್, ಕುಲಸಚಿವರಾದ ಡಾ. ಬಿ. ಮಂಜುನಾಥ್, ನಿರ್ದೇಶಕರಾದ ಡಾ. ಪಿ.ಎ. ಕುಶಾಲಪ್ಪ, ನಿವೃತ್ತ ಕುಲಪತಿಗಳಾದ ಡಾ. ರಮಾನಂದ ಶೆಟ್ಟಿಯವರು



ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಅಭಿವಿನ್ಯಾಸ ಕಾರ್ಯಕ್ರಮವನ್ನು ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಪಿ. ಈಶ್ವರ ಭಟ್ ಉದ್ಘಾಟಿಸಿದರು. ಚಿತ್ರದಲ್ಲಿ ಪ್ರೊ. ಕೆ.ಎಸ್. ಸುರೇಶ್, ಶ್ರೀ ಎ.ಪಿ. ಚಂದ್ರಶೇಖರ್, ಡಾ. ಎಸ್. ನಟರಾಜ್‌ರವರು

## ನೆರೆ ಸಂತ್ರಸ್ತರಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ನೆರವು

ರಾಜ್ಯದಲ್ಲಿ ತಲೆದೋರಿರುವ ನೆರೆ ಹಾವಳಿಗೆ ಸಹಾಯ ಹಸ್ತ ಚಾಚಿರುವ ಶ್ರೀ ಸುತ್ತೂರು ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 50 ಲಕ್ಷ ರೂ.ಗಳನ್ನು ದೇಣಿಗೆ ನೀಡಲಾಯಿತು.

ಬೆಂಗಳೂರಿನ ಜಯನಗರದಲ್ಲಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಮುಚ್ಚಯದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಪರಿಹಾರದ ಚೆಕ್ಕನ್ನು ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ ನೀಡಿದರು.

ಸಂತ್ರಸ್ತ ಕುಟುಂಬದ ಮಕ್ಕಳಿಗೆ ಸಾಮಾನ್ಯ, ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಉಚಿತ ಪ್ರವೇಶಾತಿಯೊಂದಿಗೆ ಊಟ ವಸತಿ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ.

ಆಗಸ್ಟ್ 29ರಂದು ನಡೆಯಬೇಕಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳ 104ನೇ ಜಯಂತಿಯನ್ನು ನೆರೆಹಾವಳಿಯಿಂದಾಗಿ ಸರಳವಾಗಿ ಆಚರಿಸಲು ನಿರ್ಧರಿಸಲಾಯಿತು.

---

## ಮೃಗಾಲಯಕ್ಕೆ ಶ್ರೀಸುತ್ತೂರು ಮಠದಿಂದ 1ಲಕ್ಷ ರೂ.ಗಳ ಕೊಡುಗೆ

ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 104ನೆಯ ಜಯಂತಿಯ ಅಂಗವಾಗಿ ನಗರದ ಶ್ರೀ ಜಯಚಾಮರಾಜೇಂದ್ರ ಮೃಗಾಲಯದ ಪ್ರಾಣಿ, ಪಕ್ಷಿಗಳ ಒಂದು ದಿನದ ಆಹಾರಕ್ಕಾಗಿ ಪ್ರತಿ ವರ್ಷದಂತೆ ಈ ಬಾರಿಯೂ 1ಲಕ್ಷರೂ.ಗಳ ಚೆಕ್ಕನ್ನು ಮೃಗಾಲಯದ ಅಧಿಕಾರಿಗಳಿಗೆ ಹಸ್ತಾಂತರಿಸಲಾಯಿತು.

ಶ್ರೀಗಳ ಜನ್ಮ ದಿನಾಚರಣೆಯನ್ನು ಆಗಸ್ಟ್ 29ರಂದು ಅದ್ದೂರಿಯಾಗಿ ಆಚರಿಸಿಕೊಂಡು ಬರಲಾಗುತ್ತಿತ್ತು. ಆದರೆ ಈಗ ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ಬಹುತೇಕ ಕಡೆ ನೆರೆಯಿಂದ ಜನರು ಸಂಕಷ್ಟಕ್ಕೀಡಾಗಿರು ವುದರಿಂದ ಸುತ್ತೂರು ಮಠ ಅತ್ಯಂತ ಸರಳವಾಗಿ ಜಯಂತಿ ಆಚರಿಸಲು ನಿರ್ಧರಿಸಲಾಗಿದೆ. ಅಲ್ಲದೆ ಮಹೋತ್ಸವಕ್ಕೆ ಖರ್ಚಾಗುತ್ತಿದ್ದ ಹಣವನ್ನು ನೆರೆ ಸಂತ್ರಸ್ತರಿಗೆ ನೀಡಲಾಗುತ್ತಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿ ತಿಳಿಸಿದರು.

ಮೃಗಾಲಯದ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಅಜಿತ್ ಕುಲಕರ್ಣಿ, ಕಾಲೇಜು ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ನಿರಂಜನಮೂರ್ತಿ ಮತ್ತು ಶ್ರೀ ಆರ್.ಎಸ್. ನಂಜುಂಡಸ್ವಾಮಿಯವರು ಹಾಜರಿದ್ದರು.

**ಜೆಎಸ್‌ಎಸ್ ಸಂಸ್ಥೆಗಳಲ್ಲಿ**
**ನಡೆಯುವ ಕಾರ್ಯಕ್ರಮದ ವರದಿಗಳು ಮತ್ತು ಛಾಯಾಚಿತ್ರಗಳನ್ನು**
**ಜೆಎಸ್‌ಎಸ್ ಮಾಸಪತ್ರಿಕೆಯ**
**ಈ ಇಮೇಲ್ ವಿಳಾಸಕ್ಕೆ ಕಳುಹಿಸುವುದು :**
**email:jssmasapatrike@gmail.com**

## ಕಾನೂನು ಸೇವೆಗೆ ಸಂವಿಧಾನದ ಅಧ್ಯಯನ ಅಗತ್ಯ

ಕಾನೂನು ಅಧ್ಯಯನ ಮಾಡುವವರು ಸಂವಿಧಾನವನ್ನು ಸಂಪೂರ್ಣವಾಗಿ ತಿಳಿದಿರಬೇಕು ಎಂದು ನಿವೃತ್ತ ನ್ಯಾಯಾಧೀಶರಾದ ಶ್ರೀ ಎ.ವಿ. ಚಂದ್ರಶೇಖರ್ ತಿಳಿಸಿದರು.

ಮೈಸೂರು ನಗರದ ಜೆಎಸ್ಎಸ್ ಕಾನೂನು ಕಾಲೇಜಿನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಅಭಿವಿನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕಾನೂನು ನಿಂತಿರುವುದು ಸಂವಿಧಾನದ ಮೇಲೆ ಆದ್ದರಿಂದ ಕಾನೂನು ಸೇವೆ ಮಾಡಲು ಇಚ್ಛಿಸುವವರು ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಸೇವೆ ಸಲ್ಲಿಸಬೇಕು ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪಿ. ಈಶ್ವರ್ ಭಟ್ ಮಾತನಾಡಿ ಕಾನೂನು ಶಾಸ್ತ್ರದಲ್ಲಿ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ವಿಷಯಗಳನ್ನು ಹೆಚ್ಚು ತಿಳಿಯಬೇಕು. ಅಲ್ಲದೆ ಪ್ರಾದೇಶಿಕ ಭಾಷೆಯಲ್ಲಿನ ಸೂಕ್ಷ್ಮತೆ ಅರಿಯುವುದರ ಜೊತೆಗೆ ವಿವಿಧ ಭಾಷೆಗಳನ್ನು ಕಲಿಯಬೇಕು. ಇದರಿಂದ ಕಾನೂನಿನ ಬಗ್ಗೆ ವ್ಯಾಪಕವಾದ ಮಾಹಿತಿ ದೊರೆಯುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಕೆ.ಎಸ್. ಸುರೇಶ್, ಪ್ರಾಂಶುಪಾಲರಾದ ಡಾ. ಎಸ್. ನಟರಾಜುರವರು ಉಪಸ್ಥಿತರಿದ್ದರು. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ಎಸ್.ಕೆ. ವಂಟಿಗೋಡಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀ ಬಿ.ಪಿ. ದೇವಮಾನೆ ಉಪಸ್ಥಿತರಿದ್ದರು.

---

## ನ್ಯಾಕ್ ತಂಡ ಭೇಟಿ

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿಗೆ ನ್ಯಾಕ್ ತಂಡ ಭೇಟಿ ನೀಡಿತ್ತು.

ಪಠ್ಯಕ್ರಮದ ರೂಪುರೇಷೆ, ಬೋಧನೆ, ಕಲಿಕೆ ಮತ್ತು ಮೌಲ್ಯಮಾಪನ, ಆವಿಷ್ಕಾರ ಮತ್ತು ವಿಸ್ತರಣಾ ಕಾರ್ಯಗಳು, ಮೂಲಭೂತ ಸೌಲಭ್ಯಗಳು ಹಾಗೂ ಕಲಿಕಾ ಸಂಪನ್ಮೂಲಗಳು ಸೇರಿದಂತೆ ನಾನಾ ಅಂಶಗಳನ್ನು ನ್ಯಾಕ್ ತಂಡವು ಪರಿಶೀಲಿಸಿತು.

ನ್ಯಾಕ್ ಮೌಲ್ಯಮಾಪನ ಸಮಿತಿ ಅಧ್ಯಕ್ಷರಾಗಿ ಒರಿಸ್ಸಾದಲ್ಲಿರುವ ಫಕೀರ್ ಮೋಹನ್ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಸಿಬಪ್ರಸಾದ್, ಸಮಿತಿಯ ಸಂಚಾಲಕರಾದ ಉತ್ತರ ಕಾಂಡ್‌ನ ಹರಿದ್ವಾರದ ಗುರುಕುಲ ಕಾಂಗ್ರಿ ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರಾದ ಡಾ. ಶ್ರವಣ್ ಕೆ. ಶರ್ಮ, ಕೊಯಮತ್ತೂರಿನ ಕೊಯಮತ್ತೂರ್ ವ್ಯವಹಾರ ಮತ್ತು ತಾಂತ್ರಿಕ ಸಂಸ್ಥೆಯ ಡಾ. ಕುಮಾರ ರಾಮಮೂರ್ತಿರವರು ಭೇಟಿ ನೀಡಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ. ಸಾಂಬಶಿವಯ್ಯನವರು, ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು ಮತ್ತು ಪ್ರೊ. ಡಿ.ಎಸ್. ಸದಾಶಿವಮೂರ್ತಿಯವರು ನ್ಯಾಕ್ ತಂಡವನ್ನು ಸ್ವಾಗತಿಸಿದರು.

ಎರಡು ದಿನಗಳ ಕಾಲ ನ್ಯಾಕ್ ತಂಡವು ಪ್ರಾಂಶುಪಾಲರು, ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳ ಮುಖ್ಯಸ್ಥರು, ವಿದ್ಯಾರ್ಥಿಗಳು;

ಹಿರಿಯ ವಿದ್ಯಾರ್ಥಿಗಳು, ಪೋಷಕರು, ಅಧ್ಯಾಪಕರು ಮತ್ತು ಅಧ್ಯಾಪಕೇತರರ ಜತೆ ಸಂವಾದ ನಡೆಸಿದರು. ನಂತರ ಕೌಶಲ ಕೇಂದ್ರ, ಕಮ್ಯೂನಿಟಿ ಕಾಲೇಜು ಸ್ಕೀಂ ವಿಭಾಗ, ಗ್ರಂಥಾಲಯ, ವಿದ್ಯಾರ್ಥಿನಿಲಯ, ಉಪಾಹಾರ ಮಂದಿರ, ಎನ್‌ಎಸ್‌ಎಸ್, ಎನ್‌ಸಿಸಿ, ಪ್ರಯೋಗಾಲಯ, ಉದ್ಯೋಗ ಮಾಹಿತಿ ಕೇಂದ್ರ, ಆಪ್ತ ಸಲಹಾ ಕೇಂದ್ರ, ಲೈಂಗಿಕ ದೌರ್ಜನ್ಯ ವಿರೋಧಿ ಘಟಕ, ವಿದ್ಯಾರ್ಥಿ ಕಿರುಕುಳ ವಿರೋಧಿ ಘಟಕ, ಭಾಷಾ ಪ್ರಯೋಗಾಲಯ, ಕ್ರೀಡಾಂಗಣಗಳು, ವಿವಿಧೋದ್ದೇಶ ವ್ಯಾಯಾಮ ಶಾಲೆ, ಕಚೇರಿ, ಪರೀಕ್ಷಾಂಗ ಹಾಗೂ ಇತರ ಸೌಲಭ್ಯಗಳ ಪರಿಶೀಲನೆ ನಡೆಸಿದರು.

ಸಂಜೆ ವಿದ್ಯಾರ್ಥಿಗಳು ನಡೆಸಿಕೊಟ್ಟ ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

---

## ಡಾ. ರಾಜೇಂದ್ರ ಶ್ರೀಗಳ ಜಯಂತಿ ಆಚರಣೆ

ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿಯನ್ನು ಆಯೋಜಿಸಲಾಗಿತ್ತು. ಸುತ್ತೂರಿನಲ್ಲಿರುವ ಶಿವರಾತ್ರೀಶ್ವರರ ಕರ್ತೃಗದ್ದುಗೆ ಹಾಗೂ ರಾಜೇಂದ್ರ ಶ್ರೀಗಳ ಗದ್ದುಗೆಗೆ ರುದ್ರಾಭಿಷೇಕ, ಅಷ್ಟೋತ್ತರ ಹಾಗೂ ಮಹಾಮಂಗಳಾರತಿ ನೆರವೇರಿಸಲಾಯಿತು. ಗುಬ್ಬಿ ತೋಟದಪ್ಪ ವಿದ್ಯಾರ್ಥಿನಿಲಯದ ಸುಮಾರು 35 ವಿದ್ಯಾರ್ಥಿಗಳಿಗೆ ಶಿವದೀಕ್ಷಾ ಸಂಸ್ಕಾರ ನೀಡಲಾಯಿತು. ಮೈಸೂರಿನ ಶ್ರೀಮಠದಲ್ಲಿ ರಾಜೇಂದ್ರ ಶ್ರೀಗಳ ಭಾವಚಿತ್ರಕ್ಕೆ ವಿಶೇಷ ಪೂಜೆ, ಮಹಾಮಂಗಳಾರತಿ ಹಾಗೂ ಪುಷ್ಪಾಂಜಲಿ ಸಲ್ಲಿಸಲಾಯಿತು. ಎರಡೂ ಕಡೆಗಳಲ್ಲಿ ವಚನ ಹಾಗೂ ಭಕ್ತಿ ಸಂಗೀತ ನೆರವೇರಿತು.



ಸಂಸ್ಥೆಯ ಪದಾಧಿಕಾರಿಗಳು, ಶಿವರಾತ್ರಿ ರಾಜೇಂದ್ರ ಸೇವಾ ಸಂಘದ ಟ್ರಸ್ಟಿಗಳು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

## ಶ್ರಾವಣ ಮಾಸದ ಪ್ರವಚನ

ಮೈಸೂರಿನ ಶ್ರೀಸುತ್ತೂರು ಮಠದಲ್ಲಿ ಶ್ರಾವಣ ಮಾಸದಾದ್ಯಂತ ರಾಘವಾಂಕ ವಿರಚಿತ 'ಹರಿಶ್ಚಂದ್ರ ಕಾವ್ಯ'ದ ಪ್ರವಚನ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿದ ಸೆಸ್ಕ್ ಮುಖ್ಯ ಅಭಿಯಂತರರಾದ ಶ್ರೀ ಎಸ್.ಟಿ. ಮಂಜುನಾಥ್ ಮಾತನಾಡಿ, ಮಠ ಮಾನ್ಯಗಳು ಜನಸಾಮಾನ್ಯರ ಬದುಕು ರೂಪಿಸುವ ಭಾಗ್ಯ ಶಿಲ್ಪಿಗಳು, ಭಾರತೀಯ ಸಂಸ್ಕೃತಿ ಉಳಿವಿಗಾಗಿ ಶ್ರಮಿಸುವುದರೊಂದಿಗೆ ಶಿಕ್ಷಣ, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸುತ್ತೂರು ಮಠದ ಸೇವೆ ಅಪಾರ ಎಂದರು.

ಅಧ್ಯಕ್ಷತೆ ವಹಿಸಿದ್ದ ದಡದಹಳ್ಳಿ ಶ್ರೀ ಗುರುಮಲ್ಲೇಶ್ವರ ಮಠದ ಶ್ರೀ ಷಡಕ್ಷರ ಸ್ವಾಮೀಜಿ ಮಾತನಾಡಿ, ಯಾವುದನ್ನು ಕೇಳಬೇಕು, ಎಷ್ಟು ಕೇಳಬೇಕು ಎಂಬುದು ಮುಖ್ಯ. ಮನಸ್ಸು ತುಂಬಾ ಚಂಚಲ, ಅದರ ವೇಗ ಅಗಣಿತ ವಾದದ್ದು. ಇಂದಿನ ದಿನಮಾನದಲ್ಲಿ ಎಲ್ಲರ ಕಣ್ಣು-ಕಿವಿ ಹಾಗೂ ಮನಸ್ಸು ಮೊಬೈಲ್‌ನಲ್ಲೇ ನಾಟಿಕೊಂಡಿವೆ. ಹೆತ್ತವರು ಹಾಗೂ ಗುರು ಹಿರಿಯರನ್ನು ಗೌರವದಿಂದ ಕಾಣುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಅರಮನೆಯ ಆಡಳಿತ ಮಂಡಳಿ ಉಪನಿರ್ದೇಶಕರಾದ ಶ್ರೀ ಟಿ.ಎಸ್. ಸುಬ್ರಹ್ಮಣ್ಯ, ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮು, ಶ್ರೀ ಕೃ. ರಾಮಚಂದ್ರ, ಪ್ರಾಧ್ಯಾಪಕರಾದ ಡಾ. ಬಿ.ವಿ. ವಸಂತಕುಮಾರ್ ಮೊದಲಾದವರಿದ್ದರು.

ಶ್ರೀಕ್ಷೇತ್ರ ಸುತ್ತೂರಿನಲ್ಲಿ ನಡೆದ ಕಾರ್ಯಕ್ರಮವನ್ನು ಮೈಸೂರಿನ ಜಂಟಿ ಕೃಷಿ ನಿರ್ದೇಶಕರಾದ ಶ್ರೀ ಎಂ. ಮಹಂತೇಶಪ್ಪನವರು ಉದ್ಘಾಟಿಸಿ ಮಾತನಾಡಿ, ಶ್ರಾವಣ ಮಾಸವು ಸಮೃದ್ಧಿಯ ಕಾಲ. ಆದರೆ ಮಾನವ ಪ್ರಕೃತಿ ಮೇಲೆ ಮಾಡುತ್ತಿರುವ ವಿನಾಶಕಾರಿ ಚಟುವಟಿಕೆಗಳಿಂದಾಗಿ ಪ್ರಕೃತಿ ಮುನಿದಂತೆ ಭಾಸವಾಗುತ್ತಿದೆ. ಅದರ ಪರಿಣಾಮ ಇಂತಹ ಶ್ರಾವಣ ಮಾಸದಲ್ಲೂ ಮಳೆಯಿಲ್ಲದೆ ಬಣಗುಡುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪಿರಿಯಾಪಟ್ಟಣ ತಾಲೂಕಿನ ದಿಂಡಗಾಡುವಿನ ಶ್ರೀ ಬಸವಜ್ಯೋತಿ ಮಠದ ಶ್ರೀ ಅಪ್ಪಾಜಿ ಸ್ವಾಮೀಜಿಯವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಲು ಸಾಲು ಹಬ್ಬಗಳಿಗೆ ಶ್ರಾವಣ ಮಾಸವೇ ನಾಂದಿ. ಇಂಥ ಶ್ರಾವಣ ಮಾಸದ ಪೂರ್ಣ ಪ್ರವಚನ ನಡೆಸುತ್ತಾ ಬಂದಿರುವ ಸುತ್ತೂರು ಶ್ರೀ ಮಠವು ಜ್ಞಾನ ದಾಸೋಹವನ್ನು ಉಣಬಡಿಸುತ್ತಿದೆ ಎಂದು ನುಡಿದರು.

ಮುಖ್ಯ ಅತಿಥಿಗಳಾಗಿದ್ದ ಮೈಸೂರಿನ ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಎಚ್.ಎಂ. ನಾಗರಾಜುರವರು ಮಾತನಾಡಿ, ಒಳ್ಳೆಯ ಕೆಲಸಗಳನ್ನು ಮಾಡಲು ವಿಳಂಬ ಮಾಡಬಾರದು. ಸತ್ಕಾರ್ಯಗಳನ್ನು ಮುಂದೂಡುತ್ತಾ ಹೋದರೆ ನಮ್ಮ ಆಯುಷ್ಯವೇ ಮುಗಿದು ಹೋಗುತ್ತದೆ. ಕಳೆದು ಹೋದ ಕಾಲ ಮತ್ತು ಭವಿಷ್ಯದ ಬಗ್ಗೆ ತಲೆಕೆಡಿಸಿಕೊಳ್ಳದೆ ವರ್ತಮಾನದಲ್ಲಿ ಏನು ಮಾಡಬೇಕು ಎಂಬ ದೃಢ ನಿರ್ಧಾರ ತಳೆಯಬೇಕು ಎಂದು ತಿಳಿಸಿದರು.

'ಹರಿಶ್ಚಂದ್ರ ಕಾವ್ಯ'ದ ಪ್ರವಚನವನ್ನು ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಸಿ.ಜಿ. ಉಷಾದೇವಿಯವರು ನಡೆಸಿಕೊಟ್ಟರೆ ಶಿಕ್ಷಕರಾದ ಶ್ರೀ ಡಿ.ಎಸ್. ಸಿದ್ದಲಿಂಗಸ್ವಾಮಿಯವರು ಕಾವ್ಯ ವಾಚನ ಮಾಡಿದರು. ಜೆಎಸ್‌ಎಸ್ ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಎಚ್.ಬಿ. ದೇವಣ್ಣ, ಮೈಸೂರು ಆಕಾಶವಾಣಿ ಕಲಾವಿದರಾದ ಶ್ರೀಮತಿ ಶೈಲಾ ಸಿದ್ದರಾಮಪ್ಪ ಮೊದಲಾದವರು ಉಪಸ್ಥಿತರಿದ್ದರು. ಜೆಎಸ್‌ಎಸ್ ಶಾಲಾ ಮಕ್ಕಳು ಪ್ರಾರ್ಥಿಸಿದರು. ಶಿಕ್ಷಕ ಶ್ರೀ ಪಿ. ರಾಚಪ್ಪ ಸ್ವಾಗತಿಸಿದರು. ಶ್ರೀ ಪಿ. ಚೇತನ್ ವಂದಿಸಿದರು. ಶ್ರೀ ಜಿ.ಎಂ. ಷಡಕ್ಷರಿ ನಿರೂಪಿಸಿದರು.

## ಜೆಎಸ್‌ಎಸ್ ಸಂಸ್ಥೆಗಳಲ್ಲಿ 73ನೇ ಸ್ವಾತಂತ್ರ್ಯ ದಿನಾಚರಣೆ

**ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿರುವ ಜೆಎಸ್‌ಎಸ್ ಸಂಸ್ಥೆಗಳ ಆಶ್ರಯದಲ್ಲಿ** 73ನೇ ಸ್ವಾತಂತ್ರ್ಯ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ಧ್ವಜಾರೋಹಣ ನೆರವೇರಿಸಿದ ಮೈಸೂರಿನ ಆಟೋಮೋಟಿವ್ ಆಕ್ಸೆಲ್ ಲಿಮಿಟೆಡ್‌ನ ಅಧ್ಯಕ್ಷರಾದ ಡಾ. ಎನ್. ಮುತ್ತುಕುಮಾರ್‌ರವರು ಹಿರಿಯರ ತ್ಯಾಗ–ಬಲಿದಾನಗಳನ್ನು ಪ್ರತಿಯೊಬ್ಬರೂ ಸ್ಮರಿಸಬೇಕು ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನ ಸಂಸ್ಥೆಯ ಕುಲಪತಿಗಳಾದ ಡಾ. ಎಚ್. ಬಸವನಗೌಡಪ್ಪ ರವರು ಮಾತನಾಡಿ ಭಾರತದ ಜನಶಕ್ತಿಯನ್ನು ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮ ದೇಶ ಸಾಧಿಸಿ ತೋರಿಸಿದೆ. ವಿದ್ಯಾರ್ಥಿಗಳು ತಮಗೆ ಸಿಕ್ಕ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ದೇಶದ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳಬೇಕೆಂದು ನುಡಿದರು.

ಬೆಂಗಳೂರಿನ ತ್ರಿವೇಣಿ ಹೈಟೆಕ್ ಪ್ರೈವೇಟ್ ಲಿಮಿಟೆಡ್‌ನ ಶ್ರೀ ಎನ್.ಎಂ. ಶಿವಕುಮಾರ್ ಮಾತನಾಡಿ ಪ್ರತಿಯೊಬ್ಬರ ದೇಹ ಸದೃಢವಾಗಿದ್ದರೆ ಮಾತ್ರ ದೇಶವೂ ಬಲಶಾಲಿಯಾಗಿರಲು ಸಾಧ್ಯ. ಆದ್ದರಿಂದ ಎಲ್ಲರೂ ಯೋಗಾಭ್ಯಾಸಿಗಳಾಗಿ ಉತ್ತಮ ಹವ್ಯಾಸಗಳನ್ನು ಮೈಗೂಡಿಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬೆಂಗಳೂರಿನ ಶಾಂಭವಿ ಶಾಂತಿಧಾಮ ಮತ್ತು ಉಮಾದೇವಿ ಸ್ತ್ರೀ ಸಮಾಜದ ಕಾರ್ಯದರ್ಶಿಗಳಾದ ಶ್ರೀಮತಿ ಪ್ರೇಮ ಸೋಮಸುಂದರ್ ಮಾತನಾಡಿ ಹಿರಿಯರ ಆದರ್ಶಗಳನ್ನು ಕಿರಿಯರು ಪಾಲಿಸುವಂತಾಗ ಬೇಕು. ಆಗ ದೇಶದ ಸಂಸ್ಕೃತಿ ಉಳಿದು ಬೆಳೆಯಲು ಸಾಧ್ಯ ಎಂದು ತಿಳಿಸಿದರು.

ವೇದಿಕೆಯಲ್ಲಿ ಸಂಸ್ಥೆಯ ಸಂಯೋಜನಾಧಿಕಾರಿ ಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ, ಶ್ರೀ ಸಂಪತ್ತು, ಶ್ರೀ ವೀರಭದ್ರಯ್ಯ, ಶ್ರೀ ಕೆ.ವಿ. ರಾವ್, ಡಾ. ಎಂ.ಸಿ. ನಟರಾಜ, ಶ್ರೀ ಎಸ್. ಶಿವಸ್ವಾಮಿ, ಶ್ರೀ ಜಿ. ಶಿವಮಲ್ಲು, ಶ್ರೀಮತಿ ಸಿ.ಪಿ. ನಿರ್ಮಲ, ಶ್ರೀ ಬಿ.ಎಂ. ಸಿದ್ದಪ್ಪ ಹಾಗೂ ಶ್ರೀ ಜಿ.ಎಂ. ಷಡಕ್ಷರಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಶಾಲೆಯ ಎನ್‌ಸಿಸಿ ವಾಯುದಳ, ಭೂದಳ, ಸ್ಕೌಟ್ಸ್ ಮತ್ತು ಗೈಡ್ಸ್, ಬ್ಯಾಂಡ್ ತಂಡಗಳು ಆಕರ್ಷಕ ಪಥ ಸಂಚಲನ ನಡೆಸಿ ಅತಿಥಿಗಳಿಗೆ ಗೌರವ ವಂದನೆ ಸಲ್ಲಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮ ಗಳು ಜರುಗಿದವು. ಶಾಲಾ ಮಕ್ಕಳು ಪ್ರಾರ್ಥಿಸಿದರು. ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ ಸ್ವಾಗತಿಸಿದರು. ಕು. ಎಚ್.ಎಂ. ಸವಿತ ವಂದಿಸಿದರು. ಶ್ರೀಮತಿ ಎಸ್. ಸವಿತ ನಿರೂಪಿಸಿದರು.

**ಮೈಸೂರಿನ ಬನ್ನಿಮಂಟಪದ ಶ್ರೀ ಶಿವರಾತ್ರೀಶ್ವರ ನಗರದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನಲ್ಲಿ** ನಡೆದ 73ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಕಳೆದ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿನಿ ಕು. ತಸ್ಮಿಯಬಾನು ಧ್ವಜಾರೋಹಣ ನೆರವೇರಿಸಿ ಸ್ವಾತಂತ್ರ್ಯ ದಿನಾಚರಣೆಯ ಮಹತ್ವ ಕುರಿತು ಮಾತನಾಡಿದರು.

ತಿಳಿಸಿದರು. ಪ್ರಾಂಶುಪಾಲರಾದ ಶ್ರೀ ಎಸ್.ಪಿ. ಶಿವಶಂಕರ್‌ರವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಇಂದಿನ ವಿದ್ಯಾರ್ಥಿಗಳೇ ದೇಶದ ಭವಿಷ್ಯದ ಸಂಪತ್ತು. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿ ಚೆನ್ನಾಗಿ ಓದಿ ದೊಡ್ಡ ಹುದ್ದೆಗಳನ್ನು ಪಡೆದು ದೇಶದ ಪ್ರಗತಿಗೆ ಮಹತ್ವದ ಕೊಡುಗೆ ನೀಡಬೇಕೆಂದು ಕರೆ ನೀಡಿದರು. ವಿದ್ಯಾರ್ಥಿನಿ ಕು. ತೌಸಿಯಾ ಬಾನು ಸ್ವಾಗತಿಸಿದರು. ಕು. ನಯನಶ್ರೀ ಕಾರ್ಯಕ್ರಮ ನಿರೂಪಿಸಿದರು. ಕು. ಮೇಘನಾ ವಂದಿಸಿದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ** 73ನೇ ಸ್ವಾತಂತ್ರ್ಯೋತ್ಸವವನ್ನು ಅತ್ಯಂತ ಸಂತೋಷ ಮತ್ತು ಸಂಭ್ರಮದಿಂದ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಭಾರತೀಯ ಸೇನೆಯ ನಿವೃತ್ತ ಯೋಧರಾದ ಶ್ರೀ ಕೆ.ಪಿ. ದೇವರಾಜರವರು ವಿದ್ಯಾರ್ಥಿಗಳಿಂದ ಪಥ ಸಂಚಲನದ ಧ್ವಜ ವಂದನೆಯನ್ನು ಸ್ವೀಕರಿಸಿ ಮಾತನಾಡುತ್ತಾ ನಾವು ಸ್ವತಂತ್ರರಾಗಿರುವುದು ಮುಖ್ಯವಲ್ಲ. ದೇಶದ ಪ್ರಜೆಯಾಗಿ ನಮಗೆಷ್ಟು ಜವಾಬ್ದಾರಿ ಇದೆ ಎನ್ನುವುದು ಮುಖ್ಯ. ವಿದ್ಯಾರ್ಥಿಗಳು ದೇಶಕ್ಕೆ ಅತ್ಯಂತ ಅವಶ್ಯಕವಾಗಿರುವ ಉತ್ತಮ ಪ್ರಾಮಾಣಿಕ ಅಧಿಕಾರಿಗಳಾಗಬೇಕು. ಪ್ರತಿಯೊಬ್ಬರು ಭ್ರಷ್ಟಾಚಾರ ನಿರ್ಮೂಲನೆ ಮಾಡುವ ಸಂಕಲ್ಪ ಮಾಡಬೇಕು. ತಾವು ತಮ್ಮ ವಿದ್ಯಾರ್ಥಿದೆಸೆ ಯಿಂದಲೆ ಶಿಸ್ತು ಹಾಗೂ ಸಮಯ ಪ್ರಜ್ಞೆ ಬೆಳೆಸಿಕೊಳ್ಳ ಬೇಕು. ನಮ್ಮ ದೇಶವನ್ನು ಪ್ರಗತಿಯತ್ತ ನಡೆಸುವ ಹೊಣೆ ಯುವಕರ ಮೇಲಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಲೆಯ ಮುಖ್ಯೋಪಾಧ್ಯಾ ಯರಾದ ಶ್ರೀ ಷಣ್ಮುಖರವರು ಮಾತನಾಡಿ ಪ್ರಸ್ತುತ ಸ್ವಾತಂತ್ರ್ಯ ದಿನಾಚರಣೆಯು ಕೇವಲ ಸಮಾರಂಭವಾಗಿದೆ. ಇದರ ಬದಲಾಗಿ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಮಹನೀಯರನ್ನು ಸ್ಮರಿಸಿ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ದೇಶವನ್ನು ಪ್ರಗತಿಯ ಹಾದಿಯಲ್ಲಿ ಮುನ್ನಡೆಸಬೇಕು. ದೇಶಪ್ರೇಮ ಬೆಳೆಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಮುಚ್ಚಯದ ಮುಖ್ಯಸ್ಥರು ಗಳಾದ ಶ್ರೀ ವೈ.ಎನ್. ಬಸವರಾಜು, ಶ್ರೀ ವೆಂಕಟಾಚಲಯ್ಯ, ಶ್ರೀಮತಿ ಮಮತಾ ಸುರೇಶ್ ಮತ್ತು ಶ್ರೀ ಶಿವಬಸಪ್ಪನವರು ಉಪಸ್ಥಿತರಿದ್ದರು. ಕು. ವೈಷ್ಣವಿ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಸೋನುಶ್ರೀ ಸ್ವಾಗತಿಸಿದರು. ಕು. ವೈಜಯಂತ್ ವಂದಿಸಿದರು. ಕು. ಹೇಮಲಕ್ಷ್ಮಿ ಕಾರ್ಯಕ್ರಮವನ್ನು ನಿರೂಪಿಸಿದರು.

**ಸಕಲೇಶಪುರದ ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ** ನಡೆದ 73ನೇ ಸ್ವಾತಂತ್ರ್ಯ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಸೈನಿಕರಾದ ಶ್ರೀ ಬಿ.ಎಸ್. ಚಂದ್ರಶೇಖರ್ ಅವರು ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತ ಪ್ರಸ್ತುತ ದಿನದಲ್ಲಿ ದೇಶದ ಅಭಿವೃದ್ಧಿಯ ದಾರಿ ಬದಲಾಗಿದೆ. ಜಮ್ಮು ಕಾಶ್ಮೀರದಲ್ಲಿ ಆದ ಬದಲಾವಣೆ, ವಿಜ್ಞಾನ ಕ್ಷೇತ್ರದಲ್ಲಿನ ಸಾಧನೆಗಳನ್ನು ಗಮನಿಸಬೇಕು. ನಾವೆಲ್ಲರೂ ಇಂದು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರುಗಳನ್ನು ಸ್ಮರಿಸಬೇಕು. ದೇಶದಲ್ಲಿರುವ ಕೆಲವೊಂದು ಲೋಪದೋಷಗಳನ್ನು ಹೋಗಲಾಡಿಸಿ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳಬೇಕಾ ಗಿದೆ. ನಾವು ಭವಿಷ್ಯದಲ್ಲಿ ದೇಶವನ್ನು ಉತ್ತಮವಾಗಿ ಮುನ್ನಡೆಸಬೇಕಾದರೆ ದೈಹಿಕವಾಗಿ ಆರೋಗ್ಯವನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕು. ದೈಹಿಕವಾದ ಆರೋಗ್ಯವನ್ನು ವೃದ್ಧಿಗೊಳಿಸುವುದಕ್ಕೆ

ಶಾಲೆಯಲ್ಲಿ ಅನೇಕ ಸೌಲಭ್ಯಗಳು ದೊರಕುತ್ತವೆ. ಆದ್ದರಿಂದ ವಿದ್ಯಾರ್ಥಿಗಳಾದ ನೀವೆಲ್ಲರೂ ಶಾಲೆಯ ಸಮಯಗಳಲ್ಲಿ ಕ್ರೀಡೆಗಳಲ್ಲಿ ಹೆಚ್ಚು ಭಾಗವಹಿಸಬೇಕು ಹಾಗೂ ಆಸಕ್ತಿದಾಯಕ ವಿಷಯ ಗಳನ್ನು ಕಲಿಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಪ್ರಾಂಶುಪಾಲರಾದ ಶ್ರೀ ಬಿ. ಮಧುಕುಮಾರ್‌ರವರು ಮಾತನಾಡಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವಿಚಾರಗಳು ನಮಗಿಂತಲೂ ನಮ್ಮ ಹಿರಿಯರಿಗೆ ಹೆಚ್ಚು ತಿಳಿದಿತ್ತು. ಆದರೆ ನಾವೆಲ್ಲ ಆ ವಿಷಯಗಳನ್ನು ಪುಸ್ತಕಗಳಿಂದ ತಿಳಿದುಕೊಳ್ಳುತ್ತಿದ್ದೇವೆ. ನಮ್ಮ ದೇಶಕ್ಕೆ ವ್ಯಾಪಾರಕ್ಕಾಗಿ ಬಂದಂತಹ ಪೋರ್ಚುಗೀಸರು ಮತ್ತು ಡಚ್ಚರು ತಮ್ಮ ಕೆಲಸ ಮುಗಿದ ಬಳಿಕ ಸ್ವದೇಶಕ್ಕೆ ಮರಳಿದರು. ಅವರ ತರುವಾಯ ಬಂದಂತಹ ಬ್ರಿಟಿಷರು ನಮ್ಮ ದೇಶದ ಸಂಪತ್ತನ್ನು ಕಂಡು ದುರಾಸೆಯಿಂದ ಇಲ್ಲಿಯೇ ಉಳಿದು ನಮ್ಮನ್ನೆಲ್ಲ ಗುಲಾಮರನ್ನಾಗಿ ಮಾಡಿಕೊಂಡರು. ನಮ್ಮ ದೇಶ ಸುಮಾರು ವರ್ಷಗಳ ಕಾಲ ಅವರ ಗುಲಾಮಗಿರಿಯಲ್ಲಿ ಬದುಕಬೇಕಾದ ಸ್ಥಿತಿ ನಿರ್ಮಾಣ ವಾಗಿತ್ತು. ಆನಂತರ ನಮ್ಮ ದೇಶದ ಮಹನೀಯರುಗಳಾ ದಂತಹ ಮಹಾತ್ಮ ಗಾಂಧೀಜಿ, ಲಾಲ್ ಬಹದ್ದೂರ್ ಶಾಸ್ತ್ರಿ, ಲಾಲ ಲಜಪತ್‌ರಾಯ್, ಸುಭಾಸ್ ಚಂದ್ರ ಬೋಸ್, ಭಗತ್ ಸಿಂಗ್ ಮುಂತಾದವರ ಮಾರ್ಗದರ್ಶನ ಹಾಗೂ ಹೋರಾಟದಿಂದ ನಮಗೆ 1947 ಆಗಸ್ಟ್ 15 ರಂದು ಸ್ವಾತಂತ್ರ್ಯ ದೊರೆಯಿತು. ಅವರು ಕೊಟ್ಟಂತಹ ಕೊಡುಗೆಯಿಂದಾಗಿ ಆಗಸ್ಟ್ 15 ನಮ್ಮೆಲ್ಲರ ಪಾಲಿಗೆ ಸುದಿನವಾಗಿದೆ ಎಂದು ಹೇಳಿದರು.

ವಿದ್ಯಾರ್ಥಿನಿಯರುಗಳಾದ ಕು. ಆಯೆಷಾ, ಕು. ಮೌಸಮಿ ಹಾಗೂ ಕು. ಪಾಯಲ್ ಕ್ರಮವಾಗಿ ಇಂಗ್ಲೀಷ್, ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ಸ್ವಾತಂತ್ರ್ಯ ಪೂರ್ವ ಹಾಗೂ ಆ ನಂತರದ ದಿನಗಳಲ್ಲಿ ದೇಶದಲ್ಲಿ ನಡೆದಂತಹ ವಿಚಾರಗಳನ್ನು ಭಾಷಣದ ಮೂಲಕ ತಿಳಿಸಿಕೊಟ್ಟರು.

ಶಾಲೆಯ 6 ಮತ್ತು 8ನೆಯ ತರಗತಿಯ ವಿದ್ಯಾರ್ಥಿಗಳು 'ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ' ಎಂಬ ನೃತ್ಯ ರೂಪಕವನ್ನು, 8ನೆಯ ತರಗತಿ ವಿದ್ಯಾರ್ಥಿಗಳು 'ಜಲಿಯನ್ ವಾಲಾಬಾಗ್' ವಿಷಯಾಧಾರಿತ ನೃತ್ಯರೂಪಕವನ್ನು ಅಭಿನಯಿಸಿದರು ಹಾಗೂ 5ನೆಯ ತರಗತಿಯ ವಿದ್ಯಾರ್ಥಿಗಳು ದೇಶಭಕ್ತಿ ಗೀತೆಗಳನ್ನು ಹಾಡಿದರು. ಚಿತ್ರಕಲಾ ವಿಭಾಗದ ವಿದ್ಯಾರ್ಥಿನಿಯರುಗಳು ಶಿವಾಜಿಯ ಚಿತ್ರವನ್ನು ಪರದೆಯ ಮೇಲೆ ಬಿಡಿಸಿದರು. ಕು. ಧನಾಂಶು ಸ್ವಾಗತಿಸಿದರು. ಕು. ಅನುರಾಗ್ ಮತ್ತು ವೃಂದದವರು ಪ್ರಾರ್ಥಿಸಿದರು, ಕು. ಸಾನ್ವಿ ಶೆಟ್ಟಿ ವಂದಿಸಿದರು. ವಿದ್ಯಾರ್ಥಿನಿ ಕು. ಸ್ಫೂರ್ತಿವರ್ಷ ನಿರೂಪಿಸಿದರು.

**ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ (ಬಾಲಜಗತ್)** ನಡೆದ ಸ್ವಾತಂತ್ರ್ಯ ದಿನಾಚರಣೆಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ವ್ಯವಸ್ಥಾಪಕರಾದ ಶ್ರೀ ಅ.ಚ. ಅಶೋಕಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕಿಯವರಾದ ಶ್ರೀಮತಿ ಎಚ್.ಎಂ. ಶೈಲಜರವರು ಯೋಧರ ಕುರಿತು ಬರೆದಿದ್ದ ಕವನ ಪ್ರಸ್ತುತಪಡಿಸಿ ವಿದ್ಯಾರ್ಥಿಗಳು ರಾಷ್ಟ್ರಾಭಿಮಾನ ಬೆಳೆಸಿಕೊಳ್ಳುವಂತೆ ಕರೆ ನೀಡಿದರು. ಶಾಲಾ ವಿದ್ಯಾರ್ಥಿಗಳಿಂದ ಪಥಸಂಚಲನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

□

# ವಿದ್ಯಾರ್ಥಿಗಳು ಭದ್ರವಾದ ಭವಿಷ್ಯಕ್ಕೆ ಉತ್ತಮ ಸಂಸ್ಕಾರ ಅಳವಡಿಸಿಕೊಳ್ಳಬೇಕು

ವಿದ್ಯಾರ್ಥಿಗಳು ಅಗತ್ಯ ಸಂಸ್ಕಾರ ಹೊಂದುವ ಮೂಲಕ ಜೀವನದಲ್ಲಿ ಉತ್ತಮವಾದ ಭವಿಷ್ಯವನ್ನು ಕಟ್ಟಿಕೊಳ್ಳಬೇಕೆಂದು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ಶ್ರೀ ಕೆ.ಪಿ. ಪ್ರದ್ಯುಮ್ನರವರು ಕರೆಕೊಟ್ಟರು.

ಜೆ.ಪಿ. ನಗರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ನಡೆದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿ, ವಿದ್ಯಾರ್ಥಿಗಳ ಮನಸ್ಸು ಜೇಡಿಮಣ್ಣಿದ್ದಂತೆ. ಆ ಮಣ್ಣಿನಿಂದ ಉತ್ತಮವಾದ ಮೂರ್ತಿಗಳನ್ನು ರೂಪಿಸಬಹುದು. ವಿದ್ಯಾರ್ಥಿಗಳು ಹಾಲಿದ್ದಂತೆ ಹಾಲಿಗೆ ಸಂಸ್ಕಾರ ನೀಡಿದಾಗ ಮಾತ್ರ ಹಾಲಿನಿಂದ ಮೊಸರು, ಮೊಸರಿನಿಂದ ಬೆಣ್ಣೆ, ಬೆಣ್ಣೆಯಿಂದ ತುಪ್ಪವಾಗುವಂತೆ ವಿದ್ಯಾರ್ಥಿಗಳಿಗೆ ಗುರುವಿನ ಮುಖೇನ ಸಂಸ್ಕಾರ ನೀಡಿದಾಗ ಆತ ಉತ್ತಮ ವಿದ್ಯಾರ್ಥಿ, ಚಿಂತಕ ಹಾಗೂ ಮಾರ್ಗದರ್ಶಿಯಾಗಬಲ್ಲ ಎಂದು ಹೇಳಿದರು.

ಕ್ರೀಡಾ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದ ಖ್ಯಾತ ಕವಿಗಳು ಮತ್ತು ಯೋಗಪಟುವಾದ ಡಾ. ಜಯಪ್ಪ ಹೊನ್ನಾಳಿಯವರು ಉತ್ತಮ ಸಂಸ್ಕೃತಿ ಎನ್ನುವುದು ಕಾಲೇಜಿನಲ್ಲಿರುವ ಸಂಸ್ಕಾರದ ರೀತಿಯಿಂದ ಗೊತ್ತಾಗುತ್ತದೆ. ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳು ಉಸಿರಾಡುವ ಕಂಪ್ಯೂಟರ್‌ಗಳಂತಿದ್ದಾರೆ. ಅವರನ್ನು ಜೀವಂತ ಮನಸ್ಸುಗಳನ್ನಾಗಿ ಪರಿವರ್ತಿಸುವ ಅವಶ್ಯಕತೆ ಇದೆ. ದುರ್ಮಾರ್ಗದತ್ತ ಧಾವಿಸುತ್ತಿರುವ ಈ ಸಮಾಜದಲ್ಲಿ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಜೀವನದಲ್ಲಿ ಇಡುವ ಪ್ರತಿಹೆಜ್ಜೆಯನ್ನೂ ಸಹ ಸರಿಯಾಗಿ ಇಡಲು ಅವಶ್ಯ ಮಾರ್ಗದರ್ಶನ ನೀಡಬೇಕು. ಮಾಡುವ ಯಾವುದೇ ಕೆಲಸವನ್ನು ಇಷ್ಟಪಟ್ಟು ಮಾಡಿದರೆ ಯಶಸ್ಸು ಖಂಡಿತಾ ಲಭಿಸುತ್ತದೆ. ಜಗತ್ತಿನ ಹಿಂದಿರುವ ಮನುಷ್ಯನ ಮನಸ್ಸುಗಳು ಸರಿಹೋದರೆ ಆತನ ಮುಂದಿರುವ ಜಗತ್ತು ತಾನಾಗಿಯೇ ಸರಿಹೋಗುತ್ತದೆ ಎಂದು ಹೇಳಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಶ್ರೀ ಜಯಚಾಮ ರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಮುಖ್ಯ ಆಡಳಿತಾಧಿಕಾರಿಗಳಾದ ಪ್ರೊ. ಜಿ.ಕೆ. ಚಂದ್ರಶೇಖರಪ್ಪ ನವರು ಕ್ರಿಯಾಶೀಲ ಚಟುವಟಿಕೆಗಳಿಂದ ವಿದ್ಯಾರ್ಥಿಗಳ ವ್ಯಕ್ತಿತ್ವ ಬೆಳವಣಿಗೆಯಾಗುತ್ತದೆ. ಆದ್ದರಿಂದ ಕೇವಲ ಪಠ್ಯ ಮಾತ್ರವಲ್ಲದೇ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲೂ ಸಕ್ರಿಯವಾಗಿ ಭಾಗವಹಿಸಬೇಕು. 350ಕ್ಕೂ ಹೆಚ್ಚು ಸಂಸ್ಥೆಗಳನ್ನು ಕಟ್ಟಿ ಬೆಳೆಸಿರುವ ಇಂತಹ ಸಂಸ್ಥೆಯಲ್ಲಿ ಓದುವ ನೀವೇ ಧನ್ಯರು. ಆಸಕ್ತಿ, ಏಕಾಗ್ರತೆ ಹಾಗೂ ಛಲವೆಂಬ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಪ್ರಾಂಶುಪಾಲರಾದ ಶ್ರೀ ಎಚ್.ಎಂ. ಮಹದೇವಪ್ಪ ನವರು ಮಾತನಾಡುತ್ತಾ ಕಾಲೇಜಿನಲ್ಲಿ ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಕಾರ್ಯಕ್ರಮಗಳು ಹಾಗೂ ವಿಶೇಷ ತರಗತಿಗಳ ಮಾಹಿತಿ ನೀಡಿದರು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಶ್ರೀ ಪ್ರವೀಣ್ ಕುಮಾರ್ ಪ್ರಾರ್ಥಿಸಿದರು. ವಿದ್ಯಾರ್ಥಿ ಸಂಘದ ಸಹ ಕಾರ್ಯದರ್ಶಿ ಕು. ಕುಸುಮಾಬಾಯಿ ಸ್ವಾಗತಿಸಿದರು. ವಿದ್ಯಾರ್ಥಿನಿ ಕು. ನಮಿತಾ ವಂದಿಸಿದರು. ಸಾಂಸ್ಕೃತಿಕ ಕಾರ್ಯದರ್ಶಿ ಶ್ರೀ ಎಸ್. ನಂದೀಶ್ ಕಾರ್ಯಕ್ರಮವನ್ನು ನಿರೂಪಿಸಿದರು. ದೈಹಿಕ ಶಿಕ್ಷಣ ಉಪನ್ಯಾಸಕರಾದ ಶ್ರೀ. ಎಸ್.ಎನ್. ನಾಗರಾಜರವರು ಹಾಗೂ ವಿಶೇಷ ಉಪನ್ಯಾಸ ಕಾರ್ಯದರ್ಶಿಗಳಾದ ಶ್ರೀಮತಿ ಎಚ್.ಟಿ. ನಿರ್ಮಲರವರು ಉಪಸ್ಥಿತರಿದ್ದರು.

# ಭತ್ತದ ಉತ್ಪಾದನಾ ತಂತ್ರಜ್ಞಾನ ಕುರಿತ ಕಾರ್ಯಾಗಾರ

ಮೈಸೂರಿನ ಕೃಷಿ ತಂತ್ರಜ್ಞಾನ ಸಂಸ್ಥೆ ಹಾಗೂ ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದಲ್ಲಿ ಭತ್ತದ ಉತ್ಪಾದನಾ ತಂತ್ರಜ್ಞಾನಗಳ ಕಾರ್ಯಾಗಾರವನ್ನು ಸುತ್ತೂರು ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 7.8.2019 ರಂದು ಆಯೋಜಿಸಲಾಗಿತ್ತು.

ಪ್ರಾಸ್ತಾವಿಕವಾಗಿ ಮಾತನಾಡಿದ ಡಾ. ಅರುಣ್ ಬಳಮಟ್ಟಿಯವರು ಕಾಲುವೆ ನೀರು ಬಿಡುವುದು ತಡವಾಗಿರುವುದರಿಂದ, ರೈತರು ಕಡಿಮೆ ಅವಧಿಗೆ ಅನುಗುಣವಾಗಿ ಬೇಸಾಯ ಕ್ರಮಗಳು, ತಳಿಗಳನ್ನು ಬಳಸಿ ಉತ್ಪಾದನೆ ಹೆಚ್ಚಿಸಿಕೊಳ್ಳಬೇಕು. ಅದರ ಬಗ್ಗೆ ರೈತರಿಗೆ ಅರಿವು ಮೂಡಿಸುವುದು ಈ ಕಾರ್ಯಾಗಾರದ ಮೂಲ ಉದ್ದೇಶ ಎಂದು ತಿಳಿಸಿದರು.

ಬೆಂಗಳೂರಿನ ಜಿಕೆವಿಕೆಯ ನಿವೃತ್ತ ಸಂಶೋಧನಾ ನಿರ್ದೇಶಕರಾದ ಡಾ. ಎಂ.ಎ. ಶಂಕರ್‌ರವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿ ರೈತರು ಭತ್ತದ ಬೆಳೆಯಲ್ಲಿ ಎಕರೆಗೆ 70 ಕ್ವಿಂಟಾಲಿನಷ್ಟು ಇಳುವರಿಯನ್ನು ತೆಗೆಯಲು ಸಾಧ್ಯವಿದೆ. ಆದರೆ ಹಲವಾರು ಕಾರಣಗಳಿಂದ ಕೇವಲ 20-25 ಕ್ವಿಂಟಾಲಿನಷ್ಟು ಬೆಳೆಯುತ್ತಿದ್ದಾರೆ. ಈ ಅಂತರವನ್ನು ನಾವು ತಂತ್ರಜ್ಞಾನದ ಮೂಲಕ ಸರಿಪಡಿಸಿಕೊಳ್ಳಬೇಕು. ಕಾರ್ಯಾಗಾರದಲ್ಲಿ ಈ ವಿಷಯವನ್ನು ತಿಳಿದುಕೊಂಡು ರೈತರು ಉತ್ತಮ ಇಳುವರಿ ಪಡೆದುಕೊಳ್ಳಿ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕೃಷಿ ತಂತ್ರಜ್ಞಾನ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿಯವರು ಮಾತನಾಡಿ ರೈತರ ಸಂಖ್ಯೆ ಕಡಿಮೆಯಾಗುತ್ತಿದೆ. ಹಳ್ಳಿಯಲ್ಲಿ ವಾಸಿಸಲು ಯಾರು ಇಷ್ಟಪಡುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ತಾಂತ್ರಿಕ ಅಧಿವೇಶನದಲ್ಲಿ ಡಾ. ಎಂ.ಎ. ಶಂಕರ್‌ರವರು ಭತ್ತದಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ ಕುರಿತು ತಿಳಿಸಿಕೊಟ್ಟರು. ಭತ್ತದ ನೇರ ಬಿತ್ತನೆ ಕುರಿತು ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಶ್ರೀ ಶಾಮರಾಜ್, ಭತ್ತದ ಪೀಡೆ ನಿರ್ವಹಣೆಯ ಬಗ್ಗೆ ಶ್ರೀ ಎಸ್. ಸತೀಶ್, ಮಣ್ಣಿನ ಆರೋಗ್ಯ ಕುರಿತು ಶ್ರೀ ಜೆ.ಜಿ. ರಾಜಣ್ಣ ಹಾಗೂ ಭತ್ತದ ಬೀಜೋತ್ಪಾದನೆ ಕುರಿತು ಶ್ರೀಮತಿ ಎಚ್.ವಿ. ದಿವ್ಯಾರವರು ರೈತರಿಗೆ ತಿಳಿಸಿಕೊಟ್ಟರು.

ಕಾರ್ಯಕ್ರಮದಲ್ಲಿ ಸುತ್ತಮುತ್ತಲಿನ ರೈತರು ಭಾಗವಹಿಸಿದ್ದರು. ಕೃಷಿ ವಿದ್ಯಾರ್ಥಿ ಶ್ರೀ ಸೃಜನ್‌ರವರು ಪ್ರಾರ್ಥಿಸಿದರು. ಕೆವಿಕೆಯ ವಿಜ್ಞಾನಿ ಶ್ರೀ ಶಾಮರಾಜ್‌ರವರು ವಂದಿಸಿದರು. ಶ್ರೀಮತಿ ದಿವ್ಯಾರವರು ನಿರೂಪಿಸಿದರು.

---

ಶ್ರೀಕ್ಷೇತ್ರದಲ್ಲಿ 2019 ರಲ್ಲಿ ಜರುಗಲಿರುವ

**ತಿಂಗಳ ಸಾಮೂಹಿಕ ವಿವಾಹ**

**ಅಕ್ಟೋಬರ್-11, ಗುರುವಾರ**

**ವಿವರಗಳಿಗೆ ಸಂಪರ್ಕಿಸಿ:**
**ಆಡಳಿತಾಧಿಕಾರಿಗಳು**
**ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**
**ದೂರವಾಣಿ ಸಂಖ್ಯೆ : 08221-232559, 232033, 232044**

---

# ಔಷಧಿ ಸಸ್ಯಕಾಶಿ

ಔಷಧಿ ಸಸ್ಯಗಳ ಬಗ್ಗೆ ನಾವು ಓದಿದ್ದೇವೆ, ಅವುಗಳ ಉಪಯೋಗವನ್ನೂ ತಿಳಿದುಕೊಂಡಿದ್ದೇವೆ. ಆದರೆ ನಮ್ಮಲ್ಲಿ ಬಹುತೇಕರು ಅದರಲ್ಲೂ ಸಸ್ಯಶಾಸ್ತ್ರದ ವಿದ್ಯಾರ್ಥಿಗಳು ಅವುಗಳನ್ನು ಕಣ್ಣಾರೆ ನೋಡುವ ಅವಕಾಶದಿಂದ ವಂಚಿತರಾಗಿದ್ದಾರೆ.

ಶತಮಾನಗಳಿಂದ ಪೂರ್ವಜರು ತಮ್ಮ ದೈಹಿಕ ಅಸಮತೋಲನ ಹಾಗೂ ಕಾಯಿಲೆಗಳಿಗೆ ಬಳಕೆ ಮಾಡಿದ್ದ ಗಿಡಮೂಲಿಕೆ ಔಷಧಿಗಳಾಗಿ ಬಳಕೆಯಾಗಿವೆ. ಕ್ರಮೇಣ ಹಿತ್ತಲಗಿಡ ಮದ್ದಲ್ಲ ಎನ್ನುವ ನಾಣ್ಣುಡಿಯನ್ನು ಮೈಗೂಡಿಸಿಕೊಳ್ಳಲು ಹೊರಟ ಕಾರಣ ಹಿತ್ತಲಿನಿಂದ ಮಾಯವಾದ ಔಷಧಿ ಸಸ್ಯಗಳು ಎಲ್ಲೋ ಕಣ್ಮರೆಯಾಗಿ ಹೋಗಿವೆ.

ಆದರೆ ಮೈಸೂರು–ನಂಜನಗೂಡು ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಗೆ ಇಂಥದ್ದೊಂದು ಅವಕಾಶ ಕಲ್ಪಿಸಲಾಗಿದೆ. ವಿವಿಧ ಜಾತಿಯ ಔಷಧಿ ಸಸ್ಯಗಳನ್ನು ಬೆಳೆಸುವ ಮೂಲಕ ಸಂಸ್ಥೆಯ ಸಸ್ಯಶಾಸ್ತ್ರ ಸ್ನಾತಕೋತ್ತರ, ಆಯುರ್ವೇದ ವೈದ್ಯಕೀಯ ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಅಧ್ಯಯನಕ್ಕೆ ಹೆಚ್ಚು ಅನುಕೂಲವಾಗಿದೆ. ವಿವಿಧ ಜಾತಿಯ ಹಾಗೂ ಕಾಯಿಲೆಗಳನ್ನು ಗುಣ ಮಾಡುವ ಔಷಧಿ ಸಸ್ಯಗಳನ್ನು ಕಾಲೇಜಿನ ಆವರಣದಲ್ಲೇ ಬೆಳೆಸಿ ಪ್ರಾತ್ಯಕ್ಷಿಕೆ ನೀಡಿರುವುದು ಹೆಮ್ಮೆಯ ವಿಷಯವಾಗಿದೆ.

ಇತ್ತೀಚೆಗೆ ಕಾಲೇಜಿಗೆ ಭೇಟಿ ನೀಡಿದ್ದ ನ್ಯಾಕ್ ಸಮಿತಿ ಸದಸ್ಯರು ಔಷಧಿ ಸಸ್ಯಕಾಶಿಯನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜೆಎಸ್‌ಎಸ್ ಸ್ನಾತಕೋತ್ತರ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು, ವಿದ್ಯಾರ್ಥಿಗಳು ವಿವಿಧೆಡೆಗಳಿಂದ ಹೆಕ್ಕಿತಂದ 80ಕ್ಕೂ ಹೆಚ್ಚು ವಿವಿಧ ಜಾತಿಯ ಔಷಧಿ ಗಿಡಗಳನ್ನು ಇಲ್ಲಿ ಅಚ್ಚುಕಟ್ಟಾಗಿ ಬೆಳೆಸಿದ್ದಾರೆ.

ಇಲ್ಲಿ ಹೊನಗೊನೆ, ಕೆಂಪುಹೊನ್ನೆ, ಸ್ಟೀವಿಯಾ, ಕೃಷ್ಣತುಳಸಿ, ರಾಧೆ ತುಳಸಿ, ಕಿರಾತಕ, ಮಧುನಾಶಿನಿ, ಹಲವು ಮಕ್ಕಳ ತಾಯಿಬೇರು, ಅಮೃತ ಬಳ್ಳಿ, ಪಾಶಾಣ ಬೇರು, ಚಕ್ರಮುನಿ, ವಿಷಪೂರಿ, ಲಿಂಬೆ, ಹುಲ್ಲು, ಅಂಕೋಲೆ ಗಿಡ, ನೋನಿಗಿಡ, ಹಿಪ್ಪಲಿ, ನಾಗದಾಳಿ, ಲಕ್ಕಿ ಬೊಂಬು, ಮರುಗ, ಪನ್ನೀರು ಎಲೆ, ಹಾವಿನಸಸ್ಯ, ಬೇವು, ನುಗ್ಗೆ, ಪುದೀನ, ವೀಳ್ಯದೆಲೆ, ಅಲೋವೇರ, ಬಸಳೆ ಸೊಪ್ಪು, ಧವನ, ಕರಿಬೇವು, ಟ್ರೂ ಅಶೋಕ ಮುಂತಾದ 80ಕ್ಕೂ ಹೆಚ್ಚು ಔಷಧಿ ಗಿಡಗಳನ್ನು ಇಲ್ಲಿ ಕಾಣಬಹುದು.

ಬಸವನ ಭಕ್ತಿ ಕೊಟ್ಟಣದ ಮನೆ.
ಸಿರಿಯಾಳನ ಭಕ್ತಿ ಕಸಬುಗೇರಿ
ಸಿಂಧುಬಲ್ಲಾಳನ ಭಕ್ತಿ ಪರದಾರ ದ್ರೋಹ
ಉಳಿದಾದ ಅಟಮಟ ಉದಾಸೀನ
ದಾಸೋಹವ ಮಾಡುವವರ
ದೈನ್ಯವೆಂಬ ಭೂತ ಸೋಂಕಿತು
ಮಣ್ಣಿನ ಮನೆಯ ಕಟ್ಟಿ ಮಾಯಾಮೋಹಿನಿ ಎಂಬ
ಮಹೇಂದ್ರಜಾಲದೊಳಗಾಗಿ ಮಾಡುವ ಮಾಟ!
ಭಕ್ತನಲ್ಲಿ ಉಂಡು ಉದ್ದಂಡ
ವೃತ್ತಿಯಲ್ಲಿ ನಡೆವವರು ಶಿವನಲ್ಲ
ಇವರು ದೇವಲೋಕ ಮರ್ತ್ಯಲೋಕಕ್ಕೆ ಹೊರಗು
ಶ್ರೀಗಿರಿ ಚನ್ನಮಲ್ಲಿಕಾರ್ಜುನಾ
ನನ್ನ ಭಕ್ತಿ ನಿನ್ನೊಳಗೈಕ್ಯವಾಯಿತಾಗಿ
ನಿರ್ವಯಲಾದೆ ಕಾಣಾ !

- ಅಕ್ಕಮಹಾದೇವಿ

## ಹಿರಿಯ ವಿದ್ಯಾರ್ಥಿನಿಯರ ಸಮಾವೇಶ

ಮೈಸೂರಿನ ಜೆಎಸ್ಎಸ್ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ ಹಿರಿಯ ವಿದ್ಯಾರ್ಥಿನಿಯರ 17ನೇ ಸಮಾವೇಶವು ಇತ್ತೀಚೆಗೆ ಸಂಸ್ಥೆಯ ಆವರಣದಲ್ಲಿ ಜರುಗಿತು.

ಸುಮಾರು 200ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಇದುವರೆಗೂ ಸಂಸ್ಥೆಯ ನಿರ್ಮಾಣ ಕಾರ್ಯದಲ್ಲಿ ಮತ್ತು ವಿದ್ಯಾರ್ಥಿನಿಯರ ಭವಿಷ್ಯವನ್ನು ರೂಪಿಸುವಲ್ಲಿ ಕೊಡುಗೆ ನೀಡಿದ ನಿವೃತ್ತ ಪ್ರಾಂಶುಪಾಲರುಗಳಿಗೆ ಗೌರವ ಸಮರ್ಪಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ವಿಶ್ರಾಂತ ಪ್ರಾಂಶುಪಾಲರಾದ ಶ್ರೀ ಕೆ.ಎಸ್. ವೀರಭದ್ರಪ್ಪ, ಡಾ. ಎಂ.ಎಸ್. ಜಯದೇವ, ಡಾ. ವಿ.ಎಸ್. ಗಜರಾಜನ್, ಡಾ. ಕೆ.ಎಲ್. ಮುಟ್ಟಬುದ್ದಿ ಅವರನ್ನು ಸನ್ಮಾನಿಸಲಾಯಿತು. ಸಂಸ್ಥೆಯ ವಿವಿಧ ವಿಭಾಗದ ಹಿರಿಯ ವಿದ್ಯಾರ್ಥಿನಿಯರಾದ ಕು. ಅಭಿಲಾಷ, ಕು. ಅನಿತಾ, ಕು. ನೇತ್ರಾವತಿ ಮತ್ತು ಕು. ಗುಣ ಗೌರವಪೂರ್ಣ ನಮನ ಹಾಗೂ ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು. ಮಿಮಿಕ್ರಿ ಶ್ಯಾಮ್ ತಮ್ಮ ಮಿಮಿಕ್ರಿ ಕಲೆಯಿಂದ ಎಲ್ಲರನ್ನು ರಂಜಿಸಿದರು. ಹಿರಿಯ ವಿದ್ಯಾರ್ಥಿನಿಯರ ಸಂಘದ ಅಧ್ಯಕ್ಷರಾದ ಶ್ರೀ ಶೇಖರ್, ಮಂಜುಳಾ, ಆರತಿ, ಜಯಮಾಲ, ಬಿ. ಮಾಲಾ, ವಿಜಯಲಕ್ಷ್ಮಿ, ರಶ್ಮಿ ಇತರರಿದ್ದರು.

## ಜೆಎಸ್ಎಸ್ ಮೆಡಿಕಲ್ ಕಾಲೇಜಿನಲ್ಲಿ ರಾಷ್ಟ್ರಮಟ್ಟದ ಸಮ್ಮೇಳನ

ಮೈಸೂರಿನ ಬನ್ನಿಮಂಟಪದಲ್ಲಿರುವ ಜೆಎಸ್ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ರಾಷ್ಟ್ರಮಟ್ಟದ 12ನೇ ಇಂಡಿಯನ್ ಸೊಸೈಟಿ ಆಫ್ ಪ್ರಾಸ್ತೋಡಾಂಟಿಕ್ಸ್ ರೆಸ್ಟೋರೇಟಿವ್ ಅಂಡ್ ಪೆರಿಯೋಡಾಂಟಿಕ್ಸ್ ಸಮ್ಮೇಳನ ನಡೆಯಿತು. ಸಮ್ಮೇಳನದಲ್ಲಿ 450ಕ್ಕೂ ಹೆಚ್ಚು ಮಂದಿ ವೈದ್ಯರು ಪಾಲ್ಗೊಂಡಿದ್ದರು.

ಸಮ್ಮೇಳನವನ್ನು ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾ ಉಪಾಧ್ಯಕ್ಷರೂ ಹಾಗೂ ಶಾಸಕರೂ ಆದ ಡಾ. ವೈ. ಭರತ್ ಶೆಟ್ಟಿಯವರು ಉದ್ಘಾಟಿಸಿ ಮಾತನಾಡಿ, ಕಳೆದ 12 ವರ್ಷಗಳಿಂದ ಇಂಡಿಯನ್ ಸೊಸೈಟಿ ಆಫ್ ಪ್ರಾಸ್ತೋಡಾಂಟಿಕ್ಸ್ ರೆಸ್ಟೋರೇಟಿವ್ ಅಂಡ್ ಪೆರಿಯೋಡಾಂಟಿಕ್ಸ್ ಸಂಸ್ಥೆ ಉತ್ಸಾಹದಿಂದ ವಿವಿಧ ಚಟುವಟಿಕೆಯಲ್ಲಿ ತೊಡಗಿಸಿ ಕೊಂಡಿರುವುದು ಶ್ಲಾಘನೀಯ. ನಿರಂತರವಾಗಿ ಉತ್ಸಾಹವನ್ನೂ ಉಳಿಸಿಕೊಂಡು ಬಂದಿರುವ ಈ ಸಂಸ್ಥೆ ಸಂಶೋಧನೆಗೆ ಇನ್ನಷ್ಟು ಆದ್ಯತೆ ನೀಡಬೇಕು. ಸಮ್ಮೇಳನ ಗಳನ್ನು ನಡೆಸುವ ಮೂಲಕ ಹೊಸ ಹೊಸ ಆಲೋಚನೆ ಗಳು ಸೃಷ್ಟಿಯಾಗುತ್ತವೆ. ನಿನ್ನೆ ನಡೆದ ಘಟನೆಯನ್ನು ಇಂದು ಸುಳ್ಳಾಗಿಸಬಹುದು. ಇಂದು ನಡೆದದ್ದು ನಾಳೆ ಹುಸಿಯಾಗಿಸುವ ಅವಕಾಶ ನಮ್ಮಲ್ಲಿದೆ. ಆದ್ದರಿಂದ ಸದಾ ಸಂಶೋಧನೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ದಂತ ವೈದ್ಯಕೀಯ ಕ್ಷೇತ್ರದಲ್ಲಿ ಕಳೆದ 5 ವರ್ಷದ ಹಿಂದೆ ಇದ್ದ ಪದ್ಧತಿ ಇಂದು ಇಲ್ಲ. ಸುಧಾರಣೆಗಳು ಆಗುತ್ತಲೇ ಇವೆ. ಹೊಸ ಹೊಸ ಸಂಶೋಧನೆಗಳು ನಡೆಯುತ್ತಿವೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಹೊಸ

ಆವಿಷ್ಕಾರ ನಡೆಸಲು ಸಮ್ಮೇಳನಗಳು ಅಡಿಗಲ್ಲಾಗಿ ಕಾರ್ಯನಿರ್ವಹಿಸಬೇಕು ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠರವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿಯು ಕುಲಸಚಿವರಾದ ಡಾ. ಬಿ. ಮಂಜುನಾಥ್, ನಿರ್ದೇಶಕರಾದ ಡಾ. ಪಿ.ಎ. ಕುಶಾಲಪ್ಪ, ಐಎಸ್ ಪಿಆರ್‌ಪಿ ಅಧ್ಯಕ್ಷರಾದ ಡಾ. ಜಾರ್ಜ್ ಪಿ.ಜಾನ್, ಪದಾಧಿಕಾರಿಗಳಾದ ಡಾ. ಎಂ.ಎಸ್. ಪ್ರತಾಪ್, ಡಾ. ಹರೀಶ್ ಶೆಟ್ಟಿ, ಡಾ. ರಾಜೇಂದ್ರ ಕಶ್ಯಪ್, ಡಾ. ಎಲ್. ಕೃಷ್ಣ ಪ್ರಸಾದ್, ಡಾ. ಎಸ್. ಮಹಾಲಕ್ಷ್ಮಿ ಮೊದಲಾದವರು ಉಪಸ್ಥಿತರಿದ್ದರು.

## ಸಾಧನೆಗೆ ಪ್ರಯತ್ನ, ಛಲ, ಪರಿಶ್ರಮವೇ ದಾರಿ

ಸಾಧನೆಗೆ ಒಂದೇ ದಾರಿ, ಅದು ಪ್ರಯತ್ನ, ಛಲ ಹಾಗೂ ಪರಿಶ್ರಮ, ನಿರಂತರ ಪ್ರಯತ್ನವಿದ್ದರೆ ಏನಾದರೊಂದು ಸಾಧಿಸಬಹುದಾಗಿದೆ ಎಂದು ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀ ನಟರಾಜನ್‌ರವರು ತಿಳಿಸಿದರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ವಸತಿ ನಿಲಯದಲ್ಲಿ ನೂತನವಾಗಿ ಪ್ರವೇಶಾತಿ ಪಡೆದ ವಿದ್ಯಾರ್ಥಿನಿಯರಿಗೆ ದಿನಾಂಕ 23.7.2019 ರಂದು ಆಯೋಜಿಸಿದ್ದ ಸ್ವಾಗತ ಹಾಗೂ ಪರಿಚಯಾತ್ಮಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಇಂದು ಎಲ್ಲರೂ ಸ್ಪರ್ಧಾತ್ಮಕ ಯುಗದಲ್ಲಿದ್ದು ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಯಲ್ಲಿದ್ದಾರೆ. ಅಲ್ಲದೆ ಅದರ ಹಂಬಲ ದಲ್ಲಿಯೂ ಇರುತ್ತಾರೆ. ಪರೀಕ್ಷೆಗಳಲ್ಲಿ ಯಶಸ್ಸು ಕಾಣಲು ಜ್ಞಾನವನ್ನು ವೃದ್ಧಿಸಿಕೊಂಡು ಅದನ್ನು ಕೌಶಲ್ಯವಾಗಿ ಪರಿವರ್ತಿಸಿ ಕೊಳ್ಳುವ ಸಾಮರ್ಥ್ಯ ಹೊಂದಿರಬೇಕು. ಇದಕ್ಕಾಗಿ ಬೇಕಾದಂತಹ ಪೂರಕ ವ್ಯವಸ್ಥೆಗಳಿಗೆ ಜೆಎಸ್‌ಎಸ್ ವಸತಿನಿಲಯದಲ್ಲಿ ಕೊರತೆಯಿಲ್ಲ. ಪ್ರಶಾಂತ ವಾತಾವರಣ, ವಿಶಾಲವಾದ ಓದುವ ಕೊಠಡಿ ಇತ್ಯಾದಿ ಸೇರಿದಂತೆ ನಿಮ್ಮ ಗುರಿ ಸಾಧಿಸಲು ಉತ್ತಮ ವ್ಯವಸ್ಥೆಯಿದ್ದು ಸದುಪಯೋಗಪಡಿಸಿಕೊಳ್ಳಿ ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ರಾದ ಪ್ರೊ. ಉಮೇಶ ವಿದ್ಯಾರ್ಥಿಗಳು ನಿರಂತರ ಅಧ್ಯಯನಶೀಲರಾಗಿ ಗ್ರಹಿಕಾ ಸಾಮರ್ಥ್ಯವನ್ನು ಉತ್ತಮಪಡಿಸಿಕೊಳ್ಳಬೇಕು. ಅದಕ್ಕಾಗಿ ಪ್ರತಿನಿತ್ಯ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಓದುವ ಹವ್ಯಾಸದೊಂದಿಗೆ ಮಾನಸಿಕವಾಗಿ ಸದೃಢರಾಗಿರಬೇಕು ಎಂದು ತಿಳಿಸಿದರು.

ನಿಲಯ ಪಾಲಕರಾದ ಶ್ರೀಮತಿ ಎ. ಸ್ಮಿತಾರವರು ವಸತಿ ನಿಲಯದ ಸೌಲಭ್ಯಗಳು, ನೀತಿ ಮತ್ತು ನಿಯಮಗಳ ಬಗ್ಗೆ ವಿವರಿಸಿದರು. ವೇದಿಕೆಯಲ್ಲಿ ನರ್ಸಿಂಗ್ ಶಾಲೆಯ ಉಪಪ್ರಾಂಶುಪಾಲರಾದ ಶ್ರೀಮತಿ ರಂಗನಾಯಕಿ, ಪ್ರೊ. ಮಹದೇವಪ್ಪ, ಶ್ರೀಮತಿ ಮಮತ, ಪ್ರೊ. ಬಸವರಾಜು ಹಾಗೂ ಶ್ರೀಮತಿ ಆರ್.ಪಿ. ಸೌಮ್ಯರವರು ಉಪಸ್ಥಿತರಿದ್ದರು.

# ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಗಳ ಉದ್ಘಾಟನೆ

**ಮೈಸೂರು ಜಿಲ್ಲೆಯ ಹುಲ್ಲಹಳ್ಳಿಯಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಸಂಯುಕ್ತಾಶ್ರಯದಲ್ಲಿ** ದಿನಾಂಕ 25.7.2019 ರಂದು ನಡೆದ ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಗಳನ್ನು ಉದ್ಘಾಟಿಸಿ ಮಾತನಾಡಿದ ಪ್ರಗತಿಪರ ರೈತ ಚಿಂತಕರಾದ ಶ್ರೀ ವಡ್ಡಗೆರೆ ಚಿನ್ನಸ್ವಾಮಿಯವರು ವಿದ್ಯಾರ್ಥಿಗಳು ಒಳ್ಳೆಯ ಗುರಿ ಹಾಗೂ ಸಂಕಲ್ಪವನ್ನು ಹೊಂದಿರಬೇಕು. ಅಕ್ಷರದ ಬೆಳಕು ಜ್ಞಾನ ಸಂಪಾದನೆಗೆ ಪಥವಾಗಿದೆ. ವೇದ ಉಪನಿಷತ್ತುಗಳ ಕಾಲದಲ್ಲಿ ಬರಹಕ್ಕಿಂತ ವಿಚಾರಧಾರೆ ಜಂಗಮವಾಣಿಯಾಗಿ ಹರಿದವು. ಪ್ರತಿಯೊಬ್ಬರು ಇತಿಹಾಸದ ಜ್ಞಾನ ಪಡೆದು ಬದುಕಿನಲ್ಲಿ ತಮ್ಮದೆ ಆದ ಹೆಜ್ಜೆಯ ಗುರುತುಗಳನ್ನು ಮೂಡಿಸಬೇಕು. ಕುವೆಂಪುರವರು ಹೇಳುವಂತೆ 'ಭತ್ತ ಬೆಳೆಯುವ ಗದ್ದೆಗಳಾಗಬೇಕೇ ಹೊರತು ಭತ್ತ ತುಂಬುವ ಚೀಲಗಳಾಗಬಾರದು' ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀ ಜಯಸ್ವಾಮಿಯವರು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ವಿದ್ಯಾರ್ಥಿಗಳನ್ನು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢರನ್ನಾಗಿ ಸುತ್ತವೆ ಎಂದರು.

ಶ್ರೀ ಶಿವಕುಮಾರಸ್ವಾಮಿ ಕಲ್ಯಾಣ ಮಂಟಪದ ಮಾಲೀಕರಾದ ಶ್ರೀ ನಟರಾಜ್‌ರವರು ಶಿಕ್ಷಣದ ಮಹತ್ವ ಕುರಿತು ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲರಾದ ಶ್ರೀ ವೃಷಭೇಂದ್ರ ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರೌಢಶಾಲಾ ವಿಭಾಗದ ಮುಖ್ಯೋಪಾಧ್ಯಾಯರಾದ ಶ್ರೀಮತಿ ಕೆ. ಗೀತಾರವರು ಉಪಸ್ಥಿತರಿದ್ದರು. ಕು. ದೀಪಿಕಾ ಪ್ರಾರ್ಥಿಸಿದರು. ಕು. ಪೂಜಾ ಸ್ವಾಗತಿಸಿದರು. ಕು. ಪ್ರಿಯಾಂಕ ವಂದಿಸಿದರು. ಕು. ಸಿಂಧೂ ಕಾರ್ಯಕ್ರಮ ನಿರೂಪಿಸಿದರು.

## ಸ್ವಾಗತ ಕಾರ್ಯಕ್ರಮ

**ನಂಜನಗೂಡಿನ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ** ದಿನಾಂಕ 20.7.2019 ರಂದು ಪ್ರಥಮ ಪಿಯುಸಿಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಜೆಎಸ್‌ಎಸ್ ಶಿಕ್ಷಣ ತರಬೇತಿ ಸಂಸ್ಥೆಯ ನಿವೃತ್ತ ಪ್ರಾಂಶುಪಾಲರಾದ ಶ್ರೀ ಸೋಮಸುಂದರ್ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಜೆಎಸ್‌ಎಸ್ ಸಂಸ್ಥೆಯ ಬಗ್ಗೆ ಹಾಗೂ ಶಿಕ್ಷಣದ ಮಹತ್ವ ಕುರಿತು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ರಾದ ಪ್ರೊ. ಸಿ.ವಿ. ಬಸವರಾಜುರವರು ಸಂಸ್ಥೆ ಬೆಳೆದು ಬಂದ ಹಾದಿ ಹಾಗೂ ಪರಮಪೂಜ್ಯರ ಆಶಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತಾ ವಿದ್ಯಾರ್ಥಿಗಳು ಕಾಲೇಜಿನಲ್ಲಿರುವ ಸೌಲಭ್ಯಗಳನ್ನು ಉತ್ತಮ ರೀತಿಯಲ್ಲಿ ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಚ್.ಎಸ್. ನಾಗೇಂದ್ರ ಕುಮಾರ್ ಅವರು, ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಅಥ್ಲೆಟಿಕ್ಸ್ ಸ್ಪರ್ಧೆ

ದಿನಾಂಕ 30.7.2019 ರಂದು ಸಾರ್ವಜನಿಕ ಶಿಕ್ಷಣ ಇಲಾಖೆಯು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ 14 ವರ್ಷದ ಒಳಗಿನ ಬಾಲಕ ಮತ್ತು ಬಾಲಕಿಯರ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ **ಮೈಸೂರಿನ ರಾಮಾನುಜ ರಸ್ತೆಯ ಜೆಎಸ್ಎಸ್ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯ (ಬಾಲಜಗತ್)** ಮಕ್ಕಳು



ವಿಜೇತ ಕ್ರೀಡಾಪಟುಗಳೊಂದಿಗೆ ಮುಖ್ಯೋಪಾಧ್ಯಾಯರಾದ ಶ್ರೀಮತಿ ಎಚ್.ಎಂ. ಶೈಲಜಾ ಹಾಗೂ ಶ್ರೀ ಎಂ.ಎನ್. ಶಿವಕುಮಾರ್

ಭಾಗವಹಿಸಿ ಹಲವು ಬಹುಮಾನಗಳನ್ನು ಪಡೆದಿರುತ್ತಾರೆ.

ಬಾಲಕಿಯರ ವಿಭಾಗದಲ್ಲಿ ಕು. ಊರ್ಮಿಳ – 100 ಮೀ. ಓಟದಲ್ಲಿ ಪ್ರಥಮ, ಕು. ಹರ್ಷಿತ – 400 ಮೀ. ಓಟದಲ್ಲಿ ಪ್ರಥಮ, ಕು. ಬಿಂದು – 200 ಮೀ. ಓಟದಲ್ಲಿ ದ್ವಿತೀಯ, 4 x 100 ಮೀ. ರಿಲೇಯಲ್ಲಿ ಕು. ಊರ್ಮಿಳ, ಕು. ಬಿಂದು, ಕು. ಹರ್ಷಿತ, ಕು. ಸಿಂಧು – ಪ್ರಥಮ ಸ್ಥಾನ ಪಡೆದಿರುತ್ತಾರೆ.

ಬಾಲಕರ ವಿಭಾಗದಲ್ಲಿ ಚಿ. ಹರ್ಷವರ್ಧನ್– 400ಮಿ. ಓಟದಲ್ಲಿ ಪ್ರಥಮ, 600 ಮಿ. ಓಟದಲ್ಲಿ ದ್ವಿತೀಯ, ಚಿ. ಅರುಣ್‌ಶೆಟ್ಟಿ–200 ಮೀ ಓಟದಲ್ಲಿ ತೃತೀಯ, 4 x 100 ಮೀ., ರಿಲೇಯಲ್ಲಿ, ಚಿ. ಚಂದ್ರಶೇಖರ, ಚಿ. ದೀಪಕ್ ದ್ವಿತೀಯ ಸ್ಥಾನ ಪಡೆದಿರುತ್ತಾರೆ.

ಹೆಚ್ಚು ವಿಜೇತ ಅಂಕಗಳನ್ನು ಪಡೆಯುವುದರ ಮೂಲಕ ವಿದ್ಯಾರ್ಥಿಗಳು ಶಾಲೆಗೆ ಸಮಗ್ರ ಪ್ರಶಸ್ತಿಯನ್ನು ದೊರಕಿಸಿ ಕೊಟ್ಟಿದ್ದಾರೆ.



ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 104ನೆಯ ಜಯಂತಿ ಸಂದರ್ಭದಲ್ಲಿ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶಿವದೀಕ್ಷಾ ಸಂಸ್ಕಾರ ನೀಡಲಾಯಿತು



ಜಿಲ್ಲಾಮಟ್ಟದ ಖೋ ಖೋ ಪಂದ್ಯಾವಳಿಯಲ್ಲಿ ವಿಜೇತರಾದ ಹುಲ್ಲಹಳ್ಳಿಯ ಜೆಎಸ್ಎಸ್ ಪದವಿಪೂರ್ವ ಕಾಲೇಜಿನ ಕ್ರೀಡಾಪಟುಗಳೊಂದಿಗೆ ಪ್ರಾಂಶುಪಾಲರಾದ ಶ್ರೀ ವೃಷಭೇಂದ್ರ ಮತ್ತು ಶ್ರೀ ಜೆ.ಎಸ್. ನಾಗಭೂಷಣ್‌ರವರು

## ಸುವರ್ಣ ಸಂಭ್ರಮ

### ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ

ಜೆಎಸ್‌ಎಸ್ ಮಹಾವಿದ್ಯಾಪೀಠವು ಸಾಮಾಜಿಕ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಾ ಬಂದಿರುವುದು ವೇದ್ಯವಾದ ಸಂಗತಿಯೇ ಆಗಿದೆ. ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಗ್ರಾಮೀಣ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಗ್ರಾಮೀಣ ಪ್ರದೇಶವಾಗಿದ್ದ ಚಾಮರಾಜನಗರದಲ್ಲಿ ಪ್ರಪ್ರಥಮವಾಗಿ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿದರು.

ಪ್ರಸ್ತುತ ನಡೆಯುತ್ತಿರುವ ಈ ಕಾಲೇಜು 1953ರಲ್ಲಿ ಚಾಮರಾಜೇಶ್ವರ ಟ್ರಸ್ಟ್‌ನ ವತಿಯಿಂದ ಪ್ರಾರಂಭವಾಗಿತ್ತು. ಅನಂತರ ಇಂಟರ್ ಮೀಡಿಯಟ್ ಕಾಲೇಜಾಗಿ ಪರಿವರ್ತನೆಗೊಂಡಿತು. ಟ್ರಸ್ಟ್ ಸುಮಾರು 12 ವರ್ಷಗಳ ಕಾಲ ಕಾಲೇಜನ್ನು ನಡೆಸಿ, ನಂತರ ಜೆಎಸ್‌ಎಸ್ ಮಹಾವಿದ್ಯಾಪೀಠಕ್ಕೆ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಟ್ಟಿತು. ಚಾಮರಾಜೇಶ್ವರ ಟ್ರಸ್ಟ್ ಕಾಲೇಜನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಟ್ರಸ್ಟ್‌ಗೆ ಮಾರ್ಗದರ್ಶನ ಮಾಡುತ್ತಾ, ಸಲಹೆ-ಸೂಚನೆಗಳನ್ನು ನೀಡುತ್ತಿದ್ದರು ಎಂಬುದನ್ನು ಟ್ರಸ್ಟ್‌ನ ಅಧ್ಯಕ್ಷರಾಗಿದ್ದ ಶ್ರೀ ಯು.ಎಂ. ಮಾದಪ್ಪನವರು ನೆನಪಿಸಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಖ್ಯಾತ ವಿದ್ವಾಂಸರಾದ ಪ್ರೊ. ಎಸ್.ವಿ. ರಂಗಣ್ಣನವರು ಇಂಗ್ಲೀಷ್ ತರಗತಿಗಳನ್ನು, ಪ್ರೊ. ಅನಂತರಂಗಾಚಾರ್‌ರವರು ಕನ್ನಡ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ 1959 ರಲ್ಲಿ ವಸತಿನಿಲಯದ ಶಂಕುಸ್ಥಾಪನೆಯನ್ನು ಕರ್ನಾಟಕದ ರಾಜ್ಯಪಾಲರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ನೆರವೇರಿಸಿದರು. ಈ ಸಮಾರಂಭದಲ್ಲಿ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಬಿ.ಡಿ. ಜತ್ತಿಯವರು ಉಪಸ್ಥಿತರಿದ್ದರು.



1967 ರಲ್ಲಿ 30 ಜನ ವಿದ್ಯಾರ್ಥಿಗಳಿಂದ ಪದವಿ ಕಾಲೇಜನ್ನು ಪ್ರಾರಂಭಿಸಲಾಯಿತು. ಮೊದಲು ವಿಜ್ಞಾನ ನಿಕಾಯವು ನಂತರ ಕಲಾ ಹಾಗೂ ವಾಣಿಜ್ಯ ನಿಕಾಯವು ಆರಂಭಗೊಂಡಿತು. ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ 1972 ರಲ್ಲಿ ಕಾಲೇಜಿನ ನೂತನ ಕಟ್ಟಡವನ್ನು ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಡಿ. ದೇವರಾಜ ಅರಸುರವರು ನೆರವೇರಿಸಿದರು.

50 ವರ್ಷಗಳ ಇತಿಹಾಸವನ್ನು ಹೊಂದಿರುವ ಕಾಲೇಜಿಗೆ ನಾಡಿನ ಹಿರಿಯ ವಿದ್ವಾಂಸರಾದ ಡಾ. ದ.ರಾ. ಬೇಂದ್ರೆ, ಡಾ. ಕೆ. ಶಿವರಾಮಕಾರಂತ, ಶ್ರೀ ಜಿ.ಪಿ. ರಾಜರತ್ನಂ, ಡಾ. ಎಲ್. ಬಸವರಾಜು, ಪ್ರೊ. ದೇಜಗೌ, ಹಿರಿಯ ಸಂಶೋಧಕರಾದ ಡಾ. ಎಂ. ಚಿದಾನಂದಮೂರ್ತಿ, ಪ್ರೊ. ಎಚ್.ಎಂ. ಚನ್ನಯ್ಯ, ಡಾ. ಸಿದ್ದಲಿಂಗಯ್ಯ, ಜಾನಪದ ತಜ್ಞರಾದ ಡಾ. ಜಿ.ಶಂ. ಪರಮಶಿವಯ್ಯ, ಕನ್ನಡ ಭಾಷಾ ಭಾರತಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ, ಡಾ. ಸಿ.ಪಿ. ಕೃಷ್ಣಕುಮಾರ್, ಡಾ. ರಾಗೌ, ಖ್ಯಾತ ಕಥೆಗಾರರಾದಂತಹ ಕುಂ. ವೀರಭದ್ರಪ್ಪ, ಶ್ರೀ ಮೂಡ್ನಾಕೂಡು ಚಿನ್ನಸ್ವಾಮಿ, ಸಂಸ್ಕೃತ ವಿದ್ವಾಂಸರಾದ ಮಲ್ಲೇಪುರಂ ಜಿ. ವೆಂಕಟೇಶ್ ಮುಂತಾದವರು ಕಾಲೇಜಿನ ವಿವಿಧ ಸಮಾರಂಭಗಳಲ್ಲಿ ಭಾಗಿಗಳಾಗಿದ್ದಾರೆ.

